ಓ ಎಸ್ ನಂಃ 300/18
ಡಿ ಡಬ್ಲ್ಯೂ ಃ 1

ದಿಃ 12.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ. ಜಿ ಎಲ್ ಎನ್ ವಕೀಲರಿಂದ

ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ನನಗೆ ಗೊತ್ತಿಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಗೊತ್ತಿದ್ದರೂ ಕೂಡ ತಾವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸುಳ್ಳು. ದಾವಾ ಸ್ವತ್ತು ನನಗೆ ಮತ್ತು ನನ್ನ ಅಕ್ಕನಿಗೆ ದಾನಪತ್ರದ ಮುಖಾಂತರ ಬಂದಿರುತ್ತದೆ. ದಾವಾ ಸ್ವತ್ತನ್ನು ಮಾರಾಟ ಮಾಡಬೇಕೆಂದು ತಾವು ಯಾವಾಗ ಅಂದುಕೊಂಡಿರಿ ಎಂದರೆ ಸಾಕ್ಷಿಯು ನಮಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶ ಮತ್ತು ಇಚ್ಚೆ ಇಲ್ಲ. ತಾವು ಮತ್ತು ತಮ್ಮ ಅಕ್ಕ ದಾವಾ ಸ್ವತ್ತನ್ನು ಮಾರಾಟ ಮಾಡಿ ಬೇರೆ ಸ್ವತ್ತನ್ನು ಖರೀದಿ ಮಾಡುವ ಉದ್ದೇಶದಿಂದ ದಾವಾ ಸ್ವತ್ತನ್ನು ಮಾರಾಟ ಮಾಡಲು ತಮ್ಮ ಇಚ್ಚೆಯನ್ನು ವ್ಯಕ್ತಪಡಿಸಿದಾಗ ವಾದಿ ದಾವಾ ಸ್ವತ್ತನ್ನು ಖರೀದಿ ಮಾಡಲು ಇಚ್ಚೆಯನ್ನು ವ್ಯಕ್ತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ವಾದಿಗೆ ರೂ.14 ಲಕ್ಷ ರೂಪಾಯಿಗೆ ಮಾರಾಟ ಮಾಡಲು ಒಪ್ಪಿ ನಿಪಿ 1ರ ಪ್ರಕಾರ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರವನ್ನು ತಯಾರು ಮಾಡಲು ದಾವಾ ಸ್ವತ್ತಿನ ಎಲ್ಲಾ ಮೂಲ ದಾಖಲಾತಿಗಳನ್ನು ವಾದಿಗೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ 1 ರ ಕ್ರಯದ ಕರಾರು ಪತ್ರವು ದಿನಾಂಕಃ 30-11-2017ರಂದು ನೊಂದಣಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ನಿಪಿ1ರ ದಾಖಲಾತಿಗೆ ತಾವು ಮತ್ತು ತಮ್ಮ ಅಕ್ಕ ಇಬ್ಬರೂ ಒಪ್ಪಿ ಸದರಿ ದಾಖಲಾತಿಗೆ ತಮ್ಮಗಳ ಸಹಿಯನ್ನು ಹಾಕಿದ್ದೀರಿ ಎಂದರೆ ಸರಿಯಲ್ಲ. ನಿಪಿ1 ರ ಕ್ರಯದ ಕರಾರು ಪತ್ರದಲ್ಲಿ ನಮೂದು ಮಾಡಿರುವ ತಾವು ವಾದಿ ಕಡೆಯಿಂದ ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿ 10 ಲಕ್ಷ ರೂ ಹಣವನ್ನು ವಾದಿಯು ನನ್ನ ಖಾತೆಗೆ ಚೆಕ್ ಮುಖಾಂತರ ಹಣವನ್ನು ವರ್ಗಾವಣೆ ಮಾಡಿರುತ್ತಾರೆ. ನಿಪಿ1 ರ ಕ್ರಯದ ಕರಾರು ಪತ್ರದ ಪ್ರಕಾರ ತಾವು ವಾದಿಗೆ ಶುದ್ದ ಕ್ರಯಪತ್ರವನ್ನು ಬರೆದು ಕೊಡದ ಕಾರಣ ದಿನಾಂಕಃ 04-07-2018ರಂದು ವಾದಿಯು ತಮಗೆ ನೋಟಿಸನ್ನು ಜಾರಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 2ರ ನೋಟಿಸು ತಮಗೆ ದಿನಾಂಕಃ 11-07-2018 ರಂದು ಜಾರಿಯಾಗಿದೆ ಎಂದರೆ ಸರಿಯಲ್ಲ. ತಾವು ಮಾಹೆಯಾನ ಶೇಕಡ 4 ರಂತೆ ಬಡ್ಡಿಯನ್ನು ವಾದಿಗೆ ನೀಡಿರುವುದಿಲ್ಲ ಆದರೂ ಸಹ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ವಾದಿಗೆ ಬಡ್ಡಿಯನ್ನು ಪಾವತಿ ಮಾಡಿದ್ದೀರಿ ಎಂದು ತೋರಿಸಲು ತಾವು ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸರಿ. ತಾವು ನ್ಯಾಯಾಲಯಕ್ಕೆ ಸದರಿ ವಿಚಾರವಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೇ ಇದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತಿದ್ದೀರಿ ಎಂದರೆ ಸರಿಯಲ್ಲ. ತಾವು ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಹಾಗೆ ರೂ 6 ಲಕ್ಷ ಹಣವನ್ನು ವಾದಿಗೆ ಹಿಂತಿರುಗಿಸಿದ್ದೀರಿ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಯು ಕ್ರಯದ ಕರಾರಿನ ಉಳಿಕೆ ಬಾಬ್ತು ಹಣವನ್ನು

ಕೊಡಲು ತಯಾರು ಇದ್ದರೂ ಸಹ ತಾವು ಅದನ್ನು ಸ್ವೀಕರಿಸದೇ ಮತ್ತು ಕ್ರಯದ ಕರಾರಿನ ಅನುಗುಣವಾಗಿ ಕ್ರಯಪತ್ರವನ್ನು ವಾದಿಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**